Sri H. D. DEVE GOWDA.—This is not happening for the first time. Questions are held over like this for the last four days. This should not happen in future.

MADAM SPEAKER.—The Education Minister has gone to Delhi.

Staff Appointed in the Personal Establishment of Ministers

409. Sri K. SRIRAMULU (Gandhinagar).—

Will the Chief Minister be pleased to state :—

(*a*) whether officers, clerks and staff appointed in the personal establishment of Ministers belong to the same language group to which the Ministers belong ;

(*b*) if so, the reasons for appointing the people of their own language ?

Sri D. DEVARAJ URS (Chief Minister).—(*a*) and (*b*) While appointing Officers, Clerks, etc., on the personal establishment of the Ministers their knowledge of English and Kannada languages which are in use in the administration is taken into consideration.

ಶ್ರೀ ಕೆ. ಶ್ರೀರಾಮುಲು.—ತಮ್ಮ ಉತ್ತರದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಇವೆರಡು ಭಾಷೆಗಳಲ್ಲಿ ಅವರಿಗಿರುವ ತಿಳಿವಳಿಕೆಯನ್ನು ಗಮನದಲ್ಲಿಟ್ಟುಕೊಂಡು, ಈ ನೇಮಕಗಳನ್ನು ಮಾಡಲಾಗಿದೆ ಎಂದು ಹೇಳಿದ್ದೀರಿ. ಆ ರೀತಿ ನೇಮಕ ಮಾಡಿಕೊಳ್ಳುವಾಗ ಒಕ್ಕಲಿಗರಾದಂಥ ಮಂತ್ರಿಗಳು ಒಕ್ಕಲಿಗರಾದವರನ್ನೇ ಪಿ.ಎ. ಆಗಿ ಮತ್ತು ಬ್ರಾಹ್ಮಣರಾದ ಮಂತ್ರಿಗಳು ಬ್ರಾಹ್ಮಣ ಪಿ.ಎ. ಅನ್ನು, ಮುಸಲ್ಮಾನ ಮಂತ್ರಿಗಳು ಮುಸಲ್ಮಾನ ಪಿ.ಎ. ಅನ್ನು ನೇಮಕ ಮಾಡಿಕೊಂಡು ಇರುವುದಕ್ಕೆ ಕಾರಣವೇನು ?

† ಶ್ರೀ ಡಿ. ದೇವರಾಜ ಅರಸ್.—ಬೇರೆ ಬೇರೆ ದರ್ಜೆಯ ನೌಕರರನ್ನು ಪ್ರತಿಯೊಬ್ಬ ಮಂತ್ರಿಗಳ ಕಛೇರಿಗೂ ಕೊಟ್ಟಿರುತ್ತೇವೆ. ಈಗ ಒಬ್ಬೊಬ್ಬರು ಮಂತ್ರಿಗಳ ಕಛೇರಿಯಲ್ಲಿಯೂ ಒಬ್ಬರು ಪ್ರೈವೇಟ್ ಸೆಕ್ರೆಟರಿ ಇರುತ್ತಾರೆ, ಸ್ಟೆನೋಸ್ ಇರುತ್ತಾರೆ, ಅಸಿಸ್ಟೆಂಟ್ ಮತ್ತು ಜೂನಿಯರ್ ಅಸಿಸ್ಟೆಂಟ್ ಎಂದು ಇರುತ್ತಾರೆ. ಈ ಪ್ರಕಾರ ಒಬ್ಬೊಬ್ಬರ ಹತ್ತಿರವೂ 5-6 ಜನ ಇರುತ್ತಾರೆ.

ಹೀಗಿರಬೇಕಾದರೆ ಯಾರೋ 5-6 ಜನ ಮಂತ್ರಿಗಳು ಅವರವರ ಜಾತಿಯ ಪ್ರೈವೇಟ್ ಸೆಕ್ರೆಟರಿಗಳನ್ನು ಇಟ್ಟುಕೊಂಡಿರಬಹುದು. ಆದ್ದರಿಂದ ಅವರವರ ಜಾತಿಯವರನ್ನೇ ಎಲ್ಲರೂ ಹುಡುಕಿಕೊಂಡು ಇಟ್ಟುಕೊಂಡಿದ್ದಾರೆ ಎಂದು ಹೇಳುವುದು ಸರಿಯಿಲ್ಲ.

ಶ್ರೀ ಕೆ. ಶ್ರೀರಾಮುಲು.—ಇತರ ಜಾತಿಗಳವರು ಪ್ರೈವೇಟ್ ಸೆಕ್ರೆಟರಿಗಳಾಗುವುದಕ್ಕೆ ಅರ್ಹರಾಗಿದ್ದರೆ ಅಂಥವರನ್ನು ಮಂತ್ರಿಗಳ ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಅವಕಾಶ ಮಾಡಿಕೊಡುತ್ತೀರಾ ?

Sri D. DEVARAJ URS.—It is purely a personal choice to select their own private secretaries. Sometimes the person, a Minister selects might happen to belong to his own caste. But so far as I am concerned, there is not even one who belongs to my caste.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಮುಂದೆ ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡುವಾಗ ಆ ಕೆಲಸವನ್ನು ಅವರಿಗೆ ಬಿಡದೆ ತಾವು ಆ ಜವಾಬ್ದಾರಿಯನ್ನು ತೆಗೆದುಕೊಂಡು ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪ್ರೈವೇಟ್ ಸೆಕ್ರೆಟರಿಗಳನ್ನು ಸೆಲೆಕ್ಟ್ ಮಾಡಿಕೊಳ್ಳುವುದನ್ನು ಆಯಾ ಮಂತ್ರಿಗಳ ಇಚ್ಛೆಯ ಪ್ರಕಾರ ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಬಿಡಬೇಕು. ಅವರಿಗೆ ಇಷ್ಟವಿಲ್ಲದೇ ಇರುವವರನ್ನು ನಾವು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಆದ್ದರಿಂದ ಮಂತ್ರಿಗಳಿಗೆ ಯಾರಲ್ಲಿ ಕಾನ್‌ಫಿಡೆನ್ಸ್ ಇರುತ್ತದೆಯೋ ಅಂಥವರನ್ನು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳು ಬೇರೆ ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡತಕ್ಕ ಸಂಪ್ರದಾಯ ಇಲ್ಲ. ತಾವು ಯಾವ ರಾಜ್ಯದಲ್ಲಿ ನೋಡಿದರೂ ಈಗ ನಮ್ಮಲ್ಲಿ ಯಾವ ಸಂಪ್ರದಾಯ ಇದೆಯೋ ಅದೇ ಸಂಪ್ರದಾಯ ಬೇರೆ ರಾಜ್ಯಗಳಲ್ಲಿಯೂ ಇದೆ. ಆದ್ದರಿಂದ ನಾವು ಫೋರ್ಸ್ ಮಾಡಿ ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಈಗ ಪ್ರತಿಯೊಬ್ಬ ಮಂತ್ರಿಗಳಿಗೂ ಅವರವರ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಇದೆಯೆಂದು ಹೇಳಿದಿರಿ, ಅವರನ್ನು ನೇಮಕ ಮಾಡಬೇಕಾದರೆ ಅವರಿಗೆ ಇರಬೇಕಾದ ರಿಕ್ವಿಜಿಟ್ ಕ್ವಾಲಿಫಿಕೇಷನ್ ಯಾವುದು ?

ಶ್ರೀ ವಾಟಾಳ್ ನಾಗರಾಜ್.—ಈಗ ಮಂತ್ರಿಮಂಡಲದಲ್ಲಿ 22 ಜನ ಮಂತ್ರಿಗಳಿದ್ದಾರೆ. ಅವರಿಗೆ ಒಬ್ಬೊಬ್ಬರು ಮಹಿಳಾ ಪ್ರೈವೇಟ್ ಸೆಕ್ರೆಟರಿಗಳನ್ನು ಏತಕ್ಕೆ ನೇಮಿಸಬಾರದು ? ಮತ್ತು ಈಗ ಈ ಮಂತ್ರಿಮಂಡಲದಲ್ಲಿರತಕ್ಕ ಮಹಿಳಾ ಮಂತ್ರಿಗಳೂ ಸಹ ಗಂಡನವರನ್ನು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿಕೊಂಡಿದ್ದಾರೆ, ಏತಕ್ಕೆ ?

ಶ್ರೀ ಡಿ. ದೇವರಾಜ ಅರಸ್.—ಅದು ಅವರಿಗೆ ಸೇರಿದ್ದು. ಮಂತ್ರಿಗಳು ಬೇಕಾದರೆ ಅವರ ಧರ್ಮಪತ್ನಿಯವರನ್ನು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್.—ಮಂತ್ರಿಗಳ ಧರ್ಮಪತ್ನಿಗಳೂ ಮಂತ್ರಿಗಳೇ ನರಿ ಬಿಡಿ.

ಶ್ರೀ ಕೆ. ಶ್ರೀರಾಮುಲು.—ಜಾತ್ಯಾತೀತ ರಾಜ್ಯ ಎಂದು ಹೇಳುವಾಗ ಮಂತ್ರಿಗಳು ಅವರ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡಿಕೊಳ್ಳವಾಗ ಅವರವರ ಜಾತಿಯವರನ್ನೇ ನೇಮಕ ಮಾಡಿಕೊಳ್ಳಬೇಕು ಎಂದರೆ ಅದು ಹೇಗಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಾನು ಈಗಾಗಲೇ ಹೇಳಿದ್ದೇನೆ, ಈಗ ಇರತಕ್ಕ ಪದ್ಧತಿಯನ್ನು ಬದಲಾಯಿಸುವುದಕ್ಕಾಗುವುದಿಲ್ಲ. ಮತ್ತು ಹೊಸದಾಗಿ ಒಂದು ಪದ್ಧತಿಯನ್ನು ಅನುಸರಿಸುವುದಕ್ಕಾಗುವುದಿಲ್ಲ. ಎಲ್ಲಾ ರಾಜ್ಯಗಳಲ್ಲೂ ಮತ್ತು ಕೇಂದ್ರದಲ್ಲೂ ಈಗ ನಮ್ಮಲ್ಲಿರತಕ್ಕ ಪದ್ಧತಿಯೇ ಇದೆ.

Fair Price Shops in Bangalore

417. **Sri K. M. NAGANNA** (Chickpet).—

Will the Minister of State for Food and Civil Supplies be pleased to state:—

the action taken against Fair Price Shops in Bangalore City that had indulged in malpractices in the supply of rice and sugar ?

Smt. E. E. VAZ (Minister of State for Food and Civil Supplies).—Action as per the provisions of law has been taken.